# ಸೋನಾಕ್ಷಿ 'ಹೊಸ' ಮನೆ

ಸೋನಾಕ್ಷಿ ಸಿನ್ಹಾ ತಮಗಾಗಿಯೇ ಹೊಸದೊಂದು ಮನೆ ನಿರ್ಮಿಸಿಕೊಂಡಿದ್ದಾರೆ. ಆದರೆ ಅದಕ್ಕಾಗಿ ಹೆತ್ತವರು ಇದ್ದ ಮನೆಯನ್ನು ಬಿಟ್ಟುಹೋಗಿಲ್ಲ. ಈಗಲೂ ಅವರು ಹೆತ್ತವರ ಜೊತೆಗೇ ವಾಸಿಸುತ್ತಿದ್ದಾರೆ. ಗೊಂದಲ ಅನ್ನಿಸುತ್ತಿದೆಯೆ...? ಇದು ಗೊಂದಲ ಹೌದಾದರೂ ನಿಜ. ಸೋನಾಕ್ಷಿ ಸಿನ್ಹಾ ವಾಸಿಸುತ್ತಿರುವುದು ಹೆತ್ತವರು ಮತ್ತು ಸೋದರರು ಇರುವ ಮನೆಯಲ್ಲೇ. ಮುಂಬೈಯ ಜುಹೂನಲ್ಲಿರುವ ಹೆತ್ತವರ ಬಂಗಲೆಯ ಹೆಸರು– ರಾಮಾಯಣ್. ಈಗ ಆ ಬಂಗಲೆಯ ಟಾಪ್ ಫ್ಲೋರ್‌ನಲ್ಲಿ ಸೋನಾಕ್ಷಿ ತಮಗೆ ಬೇಕಾದಂತೆ ತನ್ನ ಹೊಸ ಮನೆಯನ್ನು ರೂಪಿಸಿಕೊಂಡಿದ್ದಾರೆ. ಹಿಂದೆ ಅಲಿಯಾ ಭಟ್ ಕಚೇರಿಯನ್ನು ವಿನ್ಯಾಸಗೊಳಿಸಿದ ಡಿಸೈನರ್ ರೂಪಿನ್ ಸೂಚಕ್ ಅವರೇ ಸೋನಾಕ್ಷಿಯ ಮನೆಯ ಇಂಟೀರಿಯರ್ ಡಿಸೈನ್ ಮಾಡಿದ್ದಾರಂತೆ.

'ಮನೆಯಲ್ಲಿ ನನಗೆ ನನ್ನದೇ ಆದ ಸ್ಪೇಸ್ ಬೇಕು. ಕುಟುಂಬದ ಜೊತೆ ವಾಸಿಸುವ ಎಲ್ಲರಿಗೂ ಇದು ಅರ್ಥವಾಗುತ್ತದೆ. ಈ ಹಿಂದೆಯೂ ನನಗೆ ಪ್ರತ್ಯೇಕ ಕೋಣೆಯಿದ್ದು ಪ್ರೈವೆಸಿ ಇತ್ತು. ಆದರೆ ಒಂದು ಇಡೀ ಅಂತಸ್ತು ನನಗಾಗಿಯೇ ಎಂದು ರೂಪಿಸುವಾಗ ಸ್ವಲ್ಪ ಕಷ್ಟ ಆದದ್ದು ನಿಜ. ಆದರೆ ರೂಪಿನ್ ನನಗೆ ಬೇಕಾದಂತೆ ಒಳಾಂಗಣ ವಿನ್ಯಾಸ ಮಾಡಿದ್ದಾರೆ' ಎಂದಿದ್ದಾರೆ ಸೋನಾಕ್ಷಿ. ಸೋನಾಕ್ಷಿಯ ಈ ಹೊಸಮನೆಯ ಚಿತ್ರಗಳು ಜಾಲತಾಣಗಳಲ್ಲಿ ಈಗಾಗಲೆ ರಾರಾಜಿಸುತ್ತಿವೆ. ಅಭಿಮಾನಿಗಳೂ ಮೆಚ್ಚಿಕೊಂಡಿದ್ದಾರೆ.

'ದಬಾಂಗ್ 3' ಲಾಕ್‌ಡೌನ್‌ಗೂ ಮುನ್ನ ಸೋನಾಕ್ಷಿ ನಟಿಸಿದ ಕೊನೆಯ ಚಿತ್ರ. ಲಾಕ್‌ಡೌನ್ ಅವಧಿಯಲ್ಲಿ ಆಕೆ ವೆಬ್ ಸೀರೀಸ್ ಕಡೆಗೆ ಗಮನ ಹರಿಸಿದರು. ಅದರ ಶೂಟಿಂಗ್ ಮುಗಿದಿದೆ. ಹೊಸ ಸಿನಿಮಾದ ಶೂಟಿಂಗ್‌ನಲ್ಲಿ ಭಾಗವಹಿಸಲು ಕಾತರದಿಂದ ಕಾದಿದ್ದೇನೆ ಎಂದಿದ್ದಾಳೆ ಆಕೆ. ಅಜಯ್ ದೇವಗನ್ ಜೊತೆಗೆ ಆಕೆ ನಟಿಸಿರುವ 'ಭುಜ್: ದಿ ಪ್ರೈಡ್ ಆಫ್ ಇಂಡಿಯಾ' ಸಿನಿಮಾದ ತನ್ನ ಪಾತ್ರದ ಬಗ್ಗೆ ಆಕೆ ತುಂಬಾ ಖುಷಿಯಿಂದ ಇದ್ದಾಳೆ. ಈ ಮಧ್ಯೆ ಬಿಹಾರದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಿದ್ದ ಆಕೆಯ ಸೋದರ ಲವ ಸಿನ್ಹಾ ಸೋತಿದ್ದರಿಂದ ಸೋನಾಕ್ಷಿಗೆ ತುಂಬಾ ಬೇಜಾರಾಗಿದೆಯಂತೆ.






# ಶಾರೂಕ್ ಶೂಟಿಂಗ್?

ಶಾರೂಕ್ ಖಾನ್ ಸದ್ಯಕ್ಕೆ ಏನು ಮಾಡುತ್ತಿದ್ದಾರೆ? ಹೊಸ ಸಿನಿಮಾದ ಶೂಟಿಂಗ್ ಶುರುವಾಗಿದೆಯೆ? 'ಹೌದು' ಎನ್ನುತ್ತಿದ್ದಾರೆ ಆತನ ಅಭಿಮಾನಿಗಳು. ಅದಕ್ಕೆ ಕಾರಣ ಆತ ಕಳೆದ ವಾರ ಅಂಧೇರಿಯಲ್ಲಿರುವ ಯಶ್‌ರಾಜ್ ಸ್ಟುಡಿಯೋದಲ್ಲಿ ಕಾಣಿಸಿಕೊಂಡದ್ದು. ಶಾರೂಕ್ ಹೊಸ ಚಿತ್ರ 'ಪಠಾಣ್'ನ ಶೂಟಿಂಗ್ ಆರಂಭವಾಗಿದೆ ಎಂದು ಅಭಿಮಾನಿಗಳು ಬಲವಾಗಿ ನಂಬಿದ್ದಾರೆ. ಆದರೆ ಯಶ್‌ರಾಜ್ ಫಿಲಂಸ್‌ನವರು ಈ ಬಗ್ಗೆ ಯಾವುದೇ ಅಧಿಕೃತ ಪ್ರಕಟಣೆ ಹೊರಡಿಸಿಲ್ಲ. ಸ್ಟುಡಿಯೋದಲ್ಲಿ ಶಾರೂಕ್ ಖಾನ್‌ನ ವ್ಯಾನಿಟಿ ವ್ಯಾನ್ ಕೂಡಾ ಇದ್ದದ್ದು ಅಭಿಮಾನಿಗಳ ಊಹೆಗೆ ಇಂಬು ಕೊಟ್ಟಿದೆ.

ಶಾರೂಕ್ ಖಾನ್ ಅಭಿನಯಿಸಿದ ಕೊನೇ ಚಿತ್ರ 'ಝೀರೊ' ಬಂದು ಹೋಗಿ ಎರಡು ವರ್ಷಗಳೇ ಉರುಳಿದವು. ಆ ಚಿತ್ರ ದಯನೀಯವಾಗಿ ಸೋತದ್ದು ಶಾರೂಕ್ ವೃತ್ತಿಜೀವನ ಮುಗಿಯುತ್ತಿದೆ ಎಂಬ ಊಹಾಪೋಹಕ್ಕೂ ಕಾರಣವಾಯಿತು. ಈ ಮಧ್ಯೆ ಹಲವು ಚಿತ್ರಕಥೆಗಳನ್ನು ಓದಿದರೂ ಶಾರೂಕ್‌ಗೆ ಯಾವುದೂ ಇಷ್ಟವಾಗಲಿಲ್ಲ. ಈ ಮಧ್ಯೆ ರಾಜ್‌ಕುಮಾರ್ ಹಿರಾನಿ ನಿರ್ದೇಶನದ ಸಾಮಾಜಿಕ ಕಾಮಿಡಿ ಚಿತ್ರವೊಂದರಲ್ಲಿ ನಟಿಸುವ ಸುದ್ದಿಯೂ ಹರಿದಾಡಿತು. ಅದಕ್ಕಿಂತ ಹೆಚ್ಚಾಗಿ ತಮಿಳು ನಿರ್ದೇಶಕ ಅಟ್ಲೀ ಯ ಚಿತ್ರದಲ್ಲಿ ಶಾರೂಕ್ ಅಪ್ಪ–ಮಗನ ಡಬಲ್ ರೋಲ್ ಒಪ್ಪಿಕೊಂಡಿರುವ ಸುದ್ದಿಯೂ ಬಂತು. ಈಗ 'ಪಠಾಣ್' ಶೂಟಿಂಗ್ ಕುರಿತ ಸುದ್ದಿಯನ್ನು ಸ್ವತಃ ಶಾರೂಕ್ ದೃಢೀಕರಿಸಬೇಕಿದೆ.

■ ಬಿಂದು